

ಹೂ ಬಿರಿದ ಜಾಲಾರ



ಜಾಲಾರಿ ಬೀಜಗಳು

# ಜಾಲಾರದ ಪುಷ್ಪಚಾರಣ

■ ರಹಮತ್ ತರೀಕೆರೆ

ಈಚೆಗೆ ತುಮಕೂರು ಸೀಮೆಯಲ್ಲಿ ಜಾಲಾರ (ಜಾಲಗಿರಿ) ಹೂವಿನ ಮರಗಳನ್ನು ನೋಡುವ ಚಾರಣ ಮಾಡಿದೆ. ಹಿಂದೆ ನೀಲಕುರಿಂಜಿ ನೋಡಲು ದೇವರಮನೆ ಬಾಬಾಬುಡನಗಿರಿಗಳ ಚಾರಣ ಮಾಡಿದ್ದೆ. ಹಿಮಾಲಯದಲ್ಲಿರುವ ಪ್ರಸಿದ್ಧ ಪುಷ್ಪಕಣಿವೆಗೂ ಹೋಗಿದ್ದೆ. ಕುರಿಂಜಿ ಹೂವು ಹನ್ನೆರಡು ವರ್ಷಗಳಿಗೊಮ್ಮೆ ಕಾಣಿಸುತ್ತದೆ. ಹಿಮಾಲಯದ ಪುಷ್ಪಕಣಿವೆಯು ಪ್ರತಿವರ್ಷ ಆಗಸ್ಟ್ ಮೊದಲ ವಾರ 600ಕ್ಕೂ ಹೆಚ್ಚು ಪ್ರಭೇದದ ಹೂವು ಅರಳಿಸುತ್ತದೆ.

ಜಾಲಾರವು ಶಿವರಾತ್ರಿ ಹೊತ್ತಿಗೆ ಹೂತಳೆಯುತ್ತದೆ. ಈ ಮೂರೂ ಕಾಡುಗಳಲ್ಲಿ ಪುಷ್ಪವೈಭವವು ಹದಿನೈದು ದಿನಗಳ ಕಾಲ ಮಾತ್ರ ಇರುತ್ತದೆ. ಕೆಲವೇ ದಿನಗಳಲ್ಲಿ ಅರಳಿ ಮಾಯವಾಗುವುದರಿಂದಲೇ ಈ ಹೂವಿನ ಕಣಿವೆಕಾಡುಗಳಿಗೆ ಮಹತ್ವ ಆಕರ್ಷಣೆ ದಕ್ಕಿರಬೇಕು.

ಜಾಲಾರ ಚಾರಣಕ್ಕಾಗಿ ನಾವು ಸೂಳೇಕಲ್ ಬೆಟ್ಟದ ಬುಡದಲ್ಲಿರುವ ಸಿದ್ಧಗಂಗಯ್ಯ ಹೊಲತಾಳು ಅವರ ತೋಟದಲ್ಲಿ ನಸುಕಿಗೇ ಸೇರಿದೆವು. ತೋಟದಲ್ಲಿ ಮಾಡಿಸಿದ್ದ ರಾಗಿಯ ಬಳೆರೊಟ್ಟಿ ಹುರುಳಿ ಚಟ್ನಿಯನ್ನು ಹೊಟ್ಟೆ ತುಂಬ ತಿಂದು ಚಾರಣ ಆರಂಭಿಸಿದೆವು. ಚಾರಣದಲ್ಲಿ ಲೇಖಕರಾದ ನಟರಾಜ ಬೂದಾಳು, ನೀ.ಹ. ರವಿಕುಮಾರ್, ಉಜ್ಜಜ್ಜಿ ರಾಜಣ್ಣ ಇದ್ದರು. ಕಾಡುಬೆಟ್ಟಗಳ ನನ್ನ ಸಾಂಪ್ರದಾಯಿಕ ಪರಿಕಲ್ಪನೆಯನ್ನೇ ಬದಲಿಸಿದ್ದು ತುಮಕೂರು ಜಿಲ್ಲೆಯ ಕಲ್ಲುಬೆಟ್ಟಗಳಲ್ಲಿರುವ ಕುರುಚಲು ಕಾಡುಗಳು. ಜಾಲಾರ ವೃಕ್ಷಗಳು ಗುಬ್ಬಿ ತಾಲ್ಲೂಕಿನ ಮದಗದ ಬೆಟ್ಟ, ಕೊರಟಗೆರೆ ತಾಲ್ಲೂಕಿನ ಸಿದ್ಧರಬೆಟ್ಟ, ಅಮ್ಮನ ಬೆಟ್ಟ, ಕುರಂಕೋಟೆ, ಸೂಳೆಕಲ್ ಬೆಟ್ಟಗಳಲ್ಲಿ ವಿಶೇಷವಾಗಿ ಕಾಣಸಿಗುತ್ತವೆ. ಇದು ತುಮಕೂರು ಸೀಮೆಯ ಕಾಡುಗಳ ಭಾಗ್ಯ.

ಶಿವಪೂಜೆಗೆಂದು ಹೂ ಬಿಡಿಸುವ ಕಾಯಕದ ಮೇಲೆ ಹಂಪಿಯ ಹರಿಹರ 'ಪುಷ್ಪರಗಳೆ' ಬರೆದ. ಆದರೆ ಶಿವರಾತ್ರಿ ದಿನಗಳಲ್ಲೇ ಹೂತಳೆವ ಜಾಲಾರದ ಬಗ್ಗೆ ಬರೆಯಲಿಲ್ಲ. ಕಾರಣ, ಹಂಪಿ ಪರಿಸರದಲ್ಲಿ ಜಾಲಾರವಿಲ್ಲ. ಇದು ತುಮಕೂರು ಸೀಮೆಯ ಕೆಂಪು ಮಣ್ಣಿನ ಕಲ್ಲುಬಂಡೆಯ ಬೆಟ್ಟಗಳಲ್ಲೇ ಬೆಳೆವ ವೃಕ್ಷ. ಜಾಲಾರದ ಹೂವು ಸೂಜಿಮಲ್ಲಿಗೆಯಂತೆ ಇರುತ್ತದೆ. ಅರಳಿದರೆ ಇಡೀ ಕಾನನವೇ ಕಂಪಿನ ತೋಟ ಆಗುತ್ತದೆ. ಹತ್ತು ವರ್ಷಗಳ ಹಿಂದೆ ನಾವು ಬೆಳುದಿಂಗಳಲ್ಲಿ ಸಿದ್ಧರಬೆಟ್ಟವನ್ನು ಟ್ರೆಕ್ ಮಾಡಿದ್ದೆವು. ಚಂದ್ರನ ಹಾಲ್‌ಬೆಳಕಲ್ಲಿ ಜಾಲಾರದ ಕಂಪು ತುಂಬಿಕೊಂಡಿತ್ತು. ಆದರೆ ಹೂವು ದರ್ಶನವಾಗಲಿಲ್ಲ.



